# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | 405 |
| ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರತಾಪಸಿಂಹ ನಾಯಕ್.ಕೆ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 12-12-2024 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಹಲವು ಅಬಕಾರಿ ಕಚೇರಿಗಳಲ್ಲಿ ಖಾಸಗಿ ವ್ಯಕ್ತಿಗಳನ್ನು ನೇಮಿಸಿಕೊಂಡು, ಅನಧಿಕೃತವಾಗಿ ಕೆಲಸ ಮಾಡಿಸುವುದರ ಜೊತೆಗೆ ಅಬಕಾರಿ ಅಧಿಕಾರಿಗಳೇ ಆ ಖಾಸಗಿ ವ್ಯಕ್ತಿಗಳಿಗೆ ವೇತನ ನೀಡುವ ಮೂಲಕ ಅಕ್ರಮವೆಸಗಲು ಬಳಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಅಬಕಾರಿ ಉಪ ಆಯುಕ್ತರ ಕಛೇರಿ (ಬಿಯುಡಿ-1 ರಿಂದ 8) ಹಾಗೂ ಅಧೀನ ಕಛೇರಿಗಳಾದ ಅಬಕಾರಿ ಉಪ ಅಧೀಕ್ಷಕರ ಕಛೇರಿ ಹಾಗೂ ವಲಯ ಕಛೇರಿಗಳ ಮೇಲೆ ದಿನಾಂಕ: 24-09-2024 ರ ಅಪರಾಹ್ನ ಮಾನ್ಯ ಲೋಕಾಯುಕ್ತ ಹಾಗೂ ಮಾನ್ಯ ಉಪ ಲೋಕಾಯುಕ್ತ ನೇತೃತ್ವದಲ್ಲಿ ದಾಳಿ ನಡೆದಿರುತ್ತದೆ.<br><br>ಪ್ರಸ್ತುತ, ಗೌ\|\| ಉಪ ಲೋಕಾಯುಕ್ತ-2 ಇವರಿಂದ ಅಬಕಾರಿ ಉಪ ಆಯುಕ್ತರ ಕಛೇರಿ, ಬೆಂಗಳೂರು ನಗರ ಜಿಲ್ಲೆ (ಬಿಯುಡಿ-8) |
| ಆ) | ಕಛೇರಿಯಲ್ಲಿ ಕೆಲಸ ಮಾಡುವ ವೇಳೆ ಸಾರ್ವಜನಿಕರಿಂದ ವಸೂಲಿ ಮಾಡಿದ ಹಣವನ್ನು ಹೊರಗುತ್ತಿಗೆ ನೌಕರರ ಬಳಿ ಇಟ್ಟಿರುವುದು ಮತ್ತು ಈ ಖಾಸಗಿ ವ್ಯಕ್ತಿಗಳ ವೈಯುಕ್ತಿಕ ಖಾತೆಗಳಿಗೆ ಸಾರ್ವಜನಿಕರಿಂದ ಹಣ ವರ್ಗಾವಣೆ ಮಾಡಿಸುವ ಮೂಲಕ ಅಕ್ರಮ ಎಸಗಿರುವವರ ವಿರುದ್ಧ ಸರ್ಕಾರ ಏನು ಕ್ರಮಕೈಗೊಂಡಿದೆ? | ಹಾಗೂ ಅಧೀನ ಕಛೇರಿಗಳ ತಪಾಸಣಾ ವರದಿಗೆ ಸಂಬಂಧಿಸಿದ ಟಿಪ್ಪಣಿ ಸ್ವೀಕೃತವಾಗಿರುತ್ತದೆ. ಸದರಿ ಟಿಪ್ಪಣಿಯಲ್ಲಿ, ಕೆಲವು ಅಬಕಾರಿ ಕಛೇರಿಗಳಲ್ಲಿ ಅನಧಿಕೃತವಾಗಿ ಖಾಸಗಿ ವ್ಯಕ್ತಿಗಳು ಕಾರ್ಯ-ನಿರ್ವಹಿಸುತ್ತಿರುವುದು ಕಂಡುಬಂದಿದ್ದು, ಆ ಖಾಸಗಿ ವ್ಯಕ್ತಿಗಳಿಗೆ ವೇತನ ನೀಡುತ್ತಿರುವುದು ವರದಿಯಲ್ಲಿ ಉಲ್ಲೇಖಿಸಲಾಗಿರುತ್ತದೆ.<br><br>ಸುತ್ತೋಲೆ ಸಂಖ್ಯೆ:ಎಕ್ಸೈಸ್-17011/30/ 2024 (ಡಿಎಸ್‌ಸಿ-1), ದಿನಾಂಕ:13-12-2024 ರಲ್ಲಿ ಕಾನೂನುಬದ್ಧವಾಗಿ ನೇಮಕ ಮಾಡಿಕೊಳ್ಳುವ ಹೊರಗುತ್ತಿಗೆ ನೌಕರರನ್ನು ಹೊರತುಪಡಿಸಿ, ಇತರೆ ಖಾಸಗಿ ವ್ಯಕ್ತಿಗಳನ್ನು ಅನಧಿಕೃತವಾಗಿ ನೇಮಕ ಮಾಡಿಕೊಂಡಲ್ಲಿ, ಸಂಬಂಧಪಟ್ಟ ಕಛೇರಿ ಮುಖ್ಯಸ್ಥರನ್ನು ನೇರ ಹೊಣೆಗಾರರನ್ನಾಗಿ ಮಾಡಿ ಅವರ |

| | | |
|---|---|---|
| | | ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಅಬಕಾರಿ ಅಪರ ಆಯುಕ್ತರು ( ಜಾ ಮ ಅ), ಬೆಳಗಾವಿ ಕೇಂದ್ರ ಸ್ಥಾನ, ರಾಜ್ಯದ ಎಲ್ಲಾ ವಿಭಾಗದ ಅಬಕಾರಿ ಜಂಟಿ ಆಯುಕ್ತರುಗಳು ಹಾಗೂ ರಾಜ್ಯ ಎಲ್ಲಾ ಜಿಲ್ಲೆಗಳ ಅಬಕಾರಿ ಉಪ ಆಯುಕ್ತರುಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿರುತ್ತದೆ.<br><br>ಗೌ\|\| ಉಪ ಲೋಕಾಯುಕ್ತ-2 ಇವರಿಂದ ಸ್ವೀಕೃತವಾದ ಟಿಪ್ಪಣಿಯಲ್ಲಿ, ಅಬಕಾರಿ ಕಛೇರಿಗಳಲ್ಲಿ ಕೆಲಸ ಮಾಡುತ್ತಿರುವ ಖಾಸಗಿ ವ್ಯಕ್ತಿಗಳ ವೈಯಕ್ತಿಕ ಖಾತೆಗಳಿಗೆ ಸಾರ್ವಜನಿಕರಿಂದ ಹಣ ವರ್ಗಾವಣೆ ಮಾಡಿರುವ ಅಂಶಗಳ ಬಗ್ಗೆ ಉಲ್ಲೇಖಗಳು ಕಂಡು ಬಂದಿರುವುದಿಲ್ಲ. |

ಆಇ 84 ಇಎಲ್‌ಕ್ಯೂ 2024

(ಆರ್.ಬಿ.ತಿಮ್ಮಾಪುರ)
ಅಬಕಾರಿ ಸಚಿವರು